ಸಿಸಿ 476/2025

ಪಿಡಬ್ಲ್ಯೂ 1

**ಸಾಕ್ಷಿಯು ದಿಃ 27.02.2026 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**<u>ಪಾಟೀ ಸವಾಲು: ಆರೋಪಿ ಪರ ವಕೀಲರಿಂದ</u>**

ನಾನು ವ್ಯವಸಾಯ ವೃತ್ತಿ ಮಾಡಿಕೊಂಡಿದ್ದೇನೆ. ನನಗೆ 2 ¾ ಎಕರೆ ನೀರಾವರಿ ಜಮೀನು ಇರುತ್ತದೆ. ಆ ಬಗ್ಗೆ ಪಹಣಿಯನ್ನು ಹಾಜರುಪಡಿಸಲು ತೂಂದರೆ ಇರುವುದಿಲ್ಲ. ನಾನು ವ್ಯವಸಾಯ ವೃತ್ತಿ ಮಾಡುತ್ತಿಲ್ಲ ಬದಲಾಗಿ ಎಲ್ಲಿ ಇಸ್ಪಿಟ್ ಆಟ ಆಡುತ್ತಿರುತ್ತಾರೋ ಅಲ್ಲಿ ಹೋಗಿ ಶೇ. 20 ರಿಂದ 30 ರಷ್ಟು ದಿನದ ಬಡ್ಡಿಗೆ ಹಣವನ್ನು ನೀಡುವ ವೃತ್ತಿಯನ್ನು ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ನಾನು ಆತನಿಗೆ ಹಣ ಕೊಡುವ 1 ತಿಂಗಳು ಮುಂಚಿನಿಂದಲೂ ಹಣ ಕೇಳುತ್ತಿದ್ದರು, ದಿಃ 25.11.2025 ರಂದು ನಾನು ಆರೋಪಿಗೆ ಹಣ ನೀಡಿರುತ್ತೇನೆ. ಆರೋಪಿಯು ಒಬ್ಬರೇ ಹಣ ಕೇಳಲು ಬಂದಿದ್ದರು ಮತ್ತು ನಾನು ಒಬ್ಬನೇ ಇದ್ದೆ. ಆರೋಪಿಗೆ ಗುಂಡ್ಲುಪೇಟೆಯ ಖುಷಿ ರೆಸಾರ್ಟ್ ನ ಮುಂದೆ ಇರುವ ಟೀ ಅಂಗಡಿಯ ಬಳಿ ಹಣ ನೀಡಿರುತ್ತೇನೆ. ಆರೋಪಿಯು ಬೇರೆ ಕಡೆ ಕೈಸಾಲ ಮಾಡಿಕೊಂಡಿದ್ದನ್ನು ತಿರಿಸಲು ನನ್ನ

ಬಳಿ ಸಾಲ ಪಡೆದಿರುತ್ತಾರೆ. ಆರೋಪಿಯು ಯಾರ ಯಾರ ಬಳಿ ಕೈ ಸಾಲ ಮಾಡಿದ್ದಾರೆ ಎಂದು ನನಗೆ ಅವರ ಹೆಸರು ಹೇಳಲಿಲ್ಲ. ಆರೋಪಿಯು ನನಗೆ 8–10 ವರ್ಷಗಳಿಂದ ಪರಿಚಯ ಇದ್ದುದ್ದರಿಂದ ಮತ್ತು ಮುಂಚೆ 2–3 ಬಾರಿ ಹಣ ಪಡೆದು ಹಿಂತಿರುಗಿಸಿದ್ದರಿಂದ ಯಾವುದೇ ಭದ್ರತೆ ಮಾಡಿಕೊಳ್ಳದೇ ಹಣವನ್ನು ನೀಡಿರುತ್ತೇನೆ, ನಂತರದಲ್ಲಿ ದಿಃ 18.01.2025 ರಂದು ನಿಪಿ 1 ಚೆಕ್ ನ್ನು ನನಗೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ 1 ಚೆಕ್ ನ್ನು ಆರೋಪಿಯು ನನಗೆ ಗುಂಡ್ಲುಪೇಟೆ ಬಸ್ ನಿಲ್ದಾಣದ ಒಳಗೆ ಹೊಟೇಲ್ ನ ಬಳಿ ನೀಡಿರುತ್ತಾರೆ, ಆಗ ನಾನು ಮತ್ತು ಆರೋಪಿ ಇಬ್ಬರೇ ಇದ್ದೆವು. ಆ ದಿನ ನಾನು ಆರೋಪಿಯನ್ನು ಸಂಜೆ 4.00 ಗಂಟೆಯಲ್ಲಿ ಫೋನ್ ನಲ್ಲಿ ಸಂಪರ್ಕ ಮಾಡಿರುತ್ತೇನೆ.

2. ನಾನು ನಿಪಿ 1 ಚೆಕ್ ನ್ನು ದಿಃ20.01.2025 ರಂದು ಬ್ಯಾಂಕ್ ಗೆ ಹಾಜರುಪಡಿಸಿರುತ್ತೇನೆ. ನಿಪಿ 1 ಚೆಕ್ ನ್ನು ಬ್ಯಾಂಕ್ ಗೆ ಹಾಜರುಪಡಿಸುವ ಮುನ್ನ ಆರೋಪಿಗೆ ಫೋನ್ ಮಾಡಿರುವುದಿಲ್ಲ. ಆರೋಪಿಯ ಖಾತೆಯಲ್ಲಿ ಹಣ ಇಲ್ಲ ಎಂದು ಬ್ಯಾಂಕ್ ನವರು ತಿಳಿಸಿರುತ್ತಾರೆ. ಬ್ಯಾಂಕ್ ಗೆ ಚೆಕ್ ನ್ನು ಹಾಜರುಪಡಿಸಲು ಚಲನ್ ನ್ನು ನಾನೇ ಭರ್ತಿ ಮಾಡಿರುತ್ತೇನೆ. ನಿಪಿ 1 ಚೆಕ್ ನಲ್ಲಿರುವ ಬರವಣಿಗೆಗಳು ಮತ್ತು ಸಹಿ ಬೇರೆ ಬೇರೆ ಶಾಹಿಗಳಲ್ಲಿವೆ ಎಂದರೆ ಸರಿಯಲ್ಲ. ವಕೀಲರ ಮೂಲಕ ನೋಟೀಸ್ ಕೊಟ್ಟ ನಂತರ ಉತ್ತರ ನೋಟೀಸ್ ನ್ನು ನಮ್ಮ ವಕೀಲರು ಸ್ವೀಕರಿಸಿರುತ್ತಾರೆ. ಉತ್ತರ ನೋಟೀಸ್ ನ ವಿಚಾರಗಳನ್ನು ನಾನು ತಿಳಿದುಕೊಂಡಿದ್ದೇನೆ. ನೀವು ಉತ್ತರ ನೋಟೀಸ್ ನ್ನು ಏಕೆ ಸ್ವೀಕರಿಸಿಲ್ಲ ಎಂದರೆ ಸಾಕ್ಷಿಯು ನಾನು ಅಪರಿಚಿತರ ಕರೆ ಎಂದು ಫೋನ್ ರಿಸಿವ್ ಮಾಡದ ಕಾರಣ ಉತ್ತರ ನೋಟೀಸ್ ನ್ನು ಸ್ವೀಕರಿಸಿಲ್ಲ ಎಂದು ನುಡಿಯುತ್ತಾರೆ. ನಮ್ಮ ವ್ಯಾಪ್ತಿಯ ಪೋಸ್ಟ್‌ಮ್ಯಾನ್ 6 ಬಾರಿ ನನಗೆ ಉತ್ತರ ನೋಟೀಸ್ ಬಗ್ಗೆ ತಿಳಿಸಿದ್ದು ನಾನು ಅವರಿಗೆ ಮಾತನಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ಉತ್ತರ ನೋಟೀಸ್ ನೀಡಿದ್ದಾರೆ ಎಂಬ ವಿಚಾರ ಗೊತ್ತಾದ ಕಾರಣದಿಂದ ನಾನು ಅದನ್ನು ಸ್ವೀಕರಿಸಿಲ್ಲ ಎಂದರೆ ಸರಿಯಲ್ಲ.

3. ಆರೋಪಿಯ ಬಳಿ 3 ಎಕರೆ ಜಮೀನು ಮತ್ತು ಬೆಂಗಳೂರಿನಲ್ಲಿ ಒಂದು ಸೈಟ್ ಇರುವುದಾಗಿ ತಿಳಿದುಕೊಂಡಿದ್ದೇನೆ. ಆರೋಪಿಯು ಅವವಿವಾಹಿತರು ಎಂದರೆ ಸರಿ. ಆರೋಪಿಗೆ ಅವರಿಗೆ ಬರುವ ಸಂಪಾಧನೆ ಅವರ ಜೀವನಕ್ಕೆ ಸಾಕಾಗುವಷ್ಟು ಇದ್ದು ನನ್ನಿಂದ ಸಾಲ ಪಡೆಯುವ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ. ಆರೋಪಿಯು ಕೆ.ಎಸ್.ಆರ್.ಟಿ.ಸಿ ಯಲ್ಲಿ ಚಾಲಕ ಕಮ್ ನಿರ್ವಾಹಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂದರೆ ಸರಿ. ನಿಪಿ 1 ಚೆಕ್ ನ್ನು ಆರೋಪಿಯು

ನನಗೆ ನೀಡಿಲ್ಲ ಬದಲಾಗಿ ಅದನ್ನು ರವಿ ಬಿನ್ ವೆಂಕಟಚಲನಾಯಕ ಎಂಬುವವರಿಗೆ ಭದ್ರತೆಗಾಗಿ ನೀಡಿದ್ದರು ಎಂದರೆ ಸರಿಯಲ್ಲ. ರವಿ ಬಿನ್ ವೆಂಕಟಚಲನಾಯಕ ಮತ್ತು ನಾನು ಸ್ನೇಹಿತರು ಎಂದರೆ ಸರಿ. ಆರೋಪಿಯು ಸದರಿ ರವಿ ರವರ ಬಳಿ ಯಾವುದಾದರು ಸಾಲ ಮಾಡಿದ್ದಾರಾ ಎಂದರೆ ಸಾಕ್ಷಿಯು ಆನ್ ಡಿಮಾಂಡ್ ಪ್ರನೋಟ್ ಬರೆದುಕೊಟ್ಟು 1 ಲಕ್ಷ ಸಾಲ ಪಡೆದುಕೊಂಡಿದ್ದರು, ಅದನ್ನು ಬಿಟ್ಟು ಬೇರೆ ವಿಚಾರ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ರವಿ ಬಿನ್ ವೆಂಕಟಚಲನಾಯಕ ರವರಿಗೆ ಆರೋಪಿಯು ಚೆಕ್ ಗಳನ್ನು ಕೊಟ್ಟಿರುವ ವಿಚಾರ ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಿಃ 05.08.2024 ರಂದು ಆರೋಪಿಯು ಸದರಿ ರವಿ ಬಿನ್ ವೆಂಕಟಚಲನಾಯಕ ರವರಿಗೆ ಅವರಿಂದ ಪಡೆದಿದ್ದ ಆನ್ ಡಿಮಾಂಡ್ ಪ್ರನೋಟ್ ನ ಬಾಬ್ತು 1 ಲಕ್ಷ ಹಣವನ್ನು ಚೆಕ್ ಮೂಲಕ ಹಿಂತಿರುಗಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯು ತಮ್ಮ ಪಿಎಫ್ ಹಣವನ್ನು ವಿತ್ ಡ್ರೊ ಮಾಡಿಕೊಂಡು ದಿಃ 05.08.2024ರ ಸಮಯಕ್ಕೆ ಅವರ ಎಲ್ಲ ಸಾಲವನ್ನು ತಿರಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ರವಿ ಬಿನ್ ವೆಂಕಟಚಲನಾಯಕ ರವರು ಆನ್ ಡಿಮಾಂಡ್ ಪ್ರನೋಟ್ ಮತ್ತು ನಿಪಿ 1 ಚೆಕ್ ನ್ನು ಆರೋಪಿಗೆ ಹಿಂತಿರುಗಿಸದೇ ಸದರಿ ಚೆಕ್ ನ್ನು ನನಗೆ ನೀಡಿ ನನ್ನ ಮೂಲಕ ಈ ಪ್ರಕರಣದ ದಾಖಲು ಮಾಡಿಸಿದ್ದಾರೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲುಃ** ಆರೋಪಿ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,

ಗುಂಡ್ಲುಪೇಟೆ.